

## ಪುಸ್ತಕ ಪರಿಚಯ


**ಭಾರತೀಯ ಖಗೋಳಶಾಸ್ತ್ರ—
ಒಂದು ಕಿರುಪರಿಚಯ**

**ಲೇಖಕರು: ಡಾ.ಎಸ್.ಬಾಲಚಂದ್ರ ರಾವ್**

**ಪ್ರಕಾಶಕರು: ಭಾರತೀಯ ವಿದ್ಯಾಭವನದ ಗಾಂಧೀ ಕೇಂದ್ರ, 43/1, ರೇಸ್ ಕೋರ್ಸ್ ರಸ್ತೆ, ಬೆಂಗಳೂರು –01**

**ಪುಟ: XIV+98 ಬೆಲೆ: 50/- ರೂ.**

ಭಾರತೀಯ ಸಂಸ್ಕೃತಿಯ ಹಿರಿಮೆ ಗರಿಮೆಗಳ ಬಗ್ಗೆ ಅರಿವು ಮೂಡಿಸಲು, ಅದರ ಬಗ್ಗೆ ಪ್ರೀತಿ ಗೌರವ ಮೂಡಿಸಲು ಸ್ವಾಮಿ ವಿವೇಕಾನಂದರೇ ಮೊದಲಾದ ಮಹನೀಯರು ಸಾಕಷ್ಟು ಪ್ರಯತ್ನಿಸಿರುವರು. ಆದರೂ ಯುವಜನತೆಗೆ ಅದು ಅರಿವಿಗೆ ಬಂದಂತಿಲ್ಲ. ಈ ಹಿನ್ನೆಲೆಯಲ್ಲಿ ಯುವ ಜನತೆಯನ್ನು ಕೇಂದ್ರವಾಗಿಟ್ಟು ಭಾರತೀಯ ಋಷಿಪರಂಪರೆಯ ಜ್ಞಾನಸಂಪತ್ತಿನ ಆಳವನ್ನು ಪುಸ್ತಕಮಾಲೆಯ ಮೂಲಕ ಪರಿಚಯಿಸಲು ಸಂಕಲ್ಪಿಸಿ ಭಾರತೀಯ ವಿದ್ಯಾಭವನ ಕ್ರಿಯಾಶೀಲವಾಗಿದೆ. ತತ್ಫಲವೇ **ಭಾರತೀಯ ಖಗೋಳಶಾಸ್ತ್ರ—ಒಂದು ಕಿರುಪರಿಚಯ** ಎಂಬ ಹೊತ್ತಿಗೆ.




೯೮ ಪುಟಗಳ ಈ ಹೊತ್ತಿಗೆ ಗಾತ್ರದಲ್ಲಿ ಸಣ್ಣದಾದರೂ ವಿಷಯದ ದೃಷ್ಟಿಯಿಂದ ಆರಂಭದಿಂದ ಕೊನೆಯವರೆಗೆ ಪುಟ ಪುಟವೂ ಮಹತ್ವದ್ದಾಗಿದೆ. ಖಗೋಳಶಾಸ್ತ್ರದ ವಿಷಯದಲ್ಲಿ ಸ್ವಲ್ಪವೂ ಪ್ರವೇಶ ಇಲ್ಲದ ಎಲ್ಲರಿಗೂ, ವಯೋಭೇದವಿಲ್ಲದೆ, ಇದು ಅತ್ಯಂತ ಉಪಕಾರಕವಾಗಿದೆ. ಕ್ರಿ.ಶ. ೧೨–೧೮ನೇ ಶತಮಾನದವರೆಗಿನ ಅವಧಿಯಲ್ಲಿ ಬೇರೆಲ್ಲ ದೇಶಗಳೂ ಕತ್ತಲೆಯಲ್ಲಿ ಮುಳುಗಿದ್ದಾಗ ಭಾರತದಲ್ಲಿ ಗಣಿತ, ಖಗೋಲ ವಿಜ್ಞಾನ ಕ್ಷೇತ್ರಗಳಲ್ಲಿ ಆದ ಅತ್ಯದ್ಭುತ ಸಾಧನೆಗಳನ್ನು ಈ ಗ್ರಂಥ ಸ್ಥೂಲವಾಗಿ ಪರಿಚಯಿಸುತ್ತದೆ, ಹಾಗೂ ಆ ಕ್ಷೇತ್ರಗಳ ಆಧುನಿಕ ತತ್ತ್ವಸಿದ್ಧಾಂತಗಳೊಡನೆ ತುಲನೆಯನ್ನೂ ಮಾಡುತ್ತದೆ.

ವೃದ್ಧರಿಗೂ ಸುಲಭವಾಗಿ ಓದಲಾಗುವಂತೆ ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿರುವ ಈ ಗ್ರಂಥ ಆರ್ಯಭಟ, ಭಾಸ್ಕರಾಚಾರ್ಯ ಮೊದಲಾದ ಖಗೋಲಜ್ಞರ ಚಿತ್ರಗಳನ್ನೂ ಹಾಗೂ ಅವರು ಸಂಶೋಧಿಸಿದ ಸೌರಮಂಡಲ, ನಕ್ಷತ್ರದರ್ಶನ, ಮುಂತಾದವುಗಳ ಚಿತ್ರಗಳನ್ನೂ ಒಳಗೊಂಡಿದೆ. ಎಂಟು ಅಧ್ಯಾಯಗಳುಳ್ಳ ಈ ಕೃತಿ 'ವೇದ-ವೇದಾಂಗ ಜ್ಯೋತಿಷ' ಎಂಬ ಅಧ್ಯಾಯದಿಂದ ಆರಂಭವಾಗುತ್ತದೆ. ಇಲ್ಲಿ ವೇದ ಕಾಲದಲ್ಲೇ ಭಾರತದಲ್ಲಿ ಪ್ರಚುರವಾಗಿದ್ದ ಜ್ಯೋತಿಷ ಸಂಬಂಧಿ ವಿಚಾರಗಳನ್ನು ಪರಿಚಯಿಸಲಾಗಿದೆ. ಯಜುರ್ವೇದ ಕಾಲದಲ್ಲೇ ಭೂಮಿ ತನ್ನ ಅಕ್ಷದಲ್ಲಿ ಬುಗುರಿಯಂತೆ ಸುತ್ತಲು ೨೩ ಘಂಟೆ ೫೬ ನಿಮಿಷ ೪.೬ ಸೆಕೆಂಡುಗಳಷ್ಟು ಕಾಲವನ್ನು ತೆಗೆದುಕೊಳ್ಳುವುದೆಂದು ನಿರ್ದೇಶಿಸಲಾಗಿದ್ದು ಇದು ಆಧುನಿಕ ಖಗೋಲ ವಿಜ್ಞಾನದ ಪ್ರಕಾರವೂ ಅಷ್ಟೆ ಎಂದು ತಿಳಿಸಲಾಗಿದೆ.

'ಭಾರತೀಯ ಖಗೋಲ ಸಿದ್ಧಾಂತದ ಕೃತಿಗಳು' ಎಂಬ ಎರಡನೇ ಅಧ್ಯಾಯದಲ್ಲಿ ಹದಿನಾರು ಜನ ಖಗೋಲವಿಜ್ಞಾನಿಗಳನ್ನು ಪರಿಚಯಿಸಲಾಗಿದ್ದು ಈ ಕ್ಷೇತ್ರದಲ್ಲಿ ಯಾವ ಯಾವ ಕಾಲದಲ್ಲಿ ಯಾರಿಂದ ಯಾವ ಯಾವ ಆವಿಷ್ಕಾರಗಳಾಯಿತೆಂಬ ಕೋಷ್ಟಕವನ್ನು ಕೊಡಲಾಗಿದೆ. ಇದು ನೆನಪಿಟ್ಟುಕೊಳ್ಳಲು ತುಂಬಾ ಉಪಕಾರಕವಾಗಿದೆ. ಮತ್ತು ಆಯಾ ಸಿದ್ಧಾಂತಗಳ ಪರಿಚಯಾತ್ಮಕ ಟಿಪ್ಪಣಿಯನ್ನು ನೀಡಲಾಗಿದೆ.

'ಭಾರತೀಯ ಪಂಚಾಂಗ'ವು, ಈ ಪಂಚ ಅಂಗಗಳ ಉಗಮ, ಅವುಗಳ ಸ್ವರೂಪ ಮುಂತಾದವನ್ನು ತಿಳಿಯಪಡಿಸುತ್ತಾ, ಭಾರತೀಯ ಕಾಲಮಾನ, ಅಧಿಕಮಾಸ, ಚಾಂದ್ರಮಾನ, ಸೌರಮಾನ ಇತ್ಯಾದಿ ಅಂಶಗಳ ವಿಸ್ತೃತ ವಿವರಣೆ ನೀಡುತ್ತದೆ.

ಈ ಕೃತಿಯಲ್ಲಿ ಮೂಡಿರುವ ಭಾರತೀಯ ಖಗೋಲಜ್ಞರ ಅದ್ಭುತ ಸಾಧನೆಯನ್ನು ಓದುತ್ತಾ ಮೈ ನವಿರೇಳುತ್ತದೆ. ಯಾವುದೇ ವಿಧವಾದ ನವೀನ ಸೌಲಭ್ಯ, ಪ್ರಯೋಗಶಾಲೆಯ ಸೌಕರ್ಯಗಳು ಇಲ್ಲದ ಕಾಲದಲ್ಲಿ ಈ ಎಲ್ಲಾ ಅನುಕೂಲಗಳನ್ನು ಹೊಂದಿರುವ ಪಾಶ್ಚಾತ್ಯ ವಿಜ್ಞಾನಿಗಳ ಸಂಶೋಧನೆ ಫಲಿತಾಂಶದಷ್ಟೇ ನಿಖರವಾದ ನಿರ್ಣಯ ಫಲಿತಾಂಶಗಳನ್ನು ತಿಳಿಸಿರುವುದರ ಓದಿದಾಗ ರೋಮಾಂಚನವಾಗುತ್ತದೆ. ಅವರ ಅದ್ಭುತ ಶ್ರದ್ಧೆ ಜ್ಞಾನ ಸಂಪತ್ತಿಗೆ ನಿರಂತರ ಯತ್ನಶೀಲತೆಗೆ ತಲೆ ಬಾಗುತ್ತದೆ.

ನಿಜವಾಗಿಯೂ ಇದು ಎಲ್ಲರೂ ಓದಲೇಬೇಕಾದಂತಹ ಕೃತಿಯಾಗಿದೆ. ಚಿಕ್ಕದಾಗಿರುವುದರಿಂದ ಆಲಸಿಕೆಯೂ ಉಂಟಾಗುವುದಿಲ್ಲ. – ಡಾ. ಎಲ್. ಪ್ರಸನ್ನಾಕ್ಷಿ